ರೀತ್ಯಾ ಒಟ್ಟು 12 ಜನ ಹಿಂದಿನ ಕೆ.ಆರ್. ಪೇಟೆ ಪುರಸಭೆ ಅಧ್ಯಕ್ಷರು/ಪ್ರದಾನರ ವಿರುದ್ಧ ಮತ್ತು 14 ಜನ ಕೆ.ಆರ್.ಪೇಟೆ ಪುರಸಭೆಯ ಹಿಂದಿನ ಮುಖ್ಯಾಧಿಕಾರಿ/ಕಾರ್ಯದರ್ಶಿಗಳ ವಿರುದ್ಧ ಕೆ.ಆರ್. ಪೇಟೆ ಪೋಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ **1860 (u/s 149,408,409,420** ಪ್ರಕಾರ ಎಫ್.ಐ.ಆರ್ ದಾಖಲಿಸಲಾಗಿರುತ್ತದೆ.

ರಾಜ್ಯದಲ್ಲಿ ವಿದ್ಯುತ್ ತಂತಿ ಬದಲಾವಣೆ

302(572); ಶ್ರೀ ಪ್ರಭು ಬಿ. ಚೌವ್ಹಾಣ್ (ಔರಾದ್)

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ತಂತಿ ಬದಲಾವಣೆಗೆ ಸರಕಾರ ಚಿಂತನೆ ನಡೆಸಿದೆಯೇ;

ಆ) ಔರಾದ್ ವಿಧಾನಸಭಾ ಕ್ಷೇತ್ರದ ಗ್ರಾಮಗಳಲ್ಲಿ ಹಾಗೂ ಔರಾದ ಪಟ್ಟಣದಲ್ಲಿ ವಿದ್ಯುತ್ ತಂತಿಗಳು ಹಾಳಾಗಿದ್ದು ಮಳೆಗಾಲದ ಸಮಯದಲ್ಲಿ ಹರಿದು ಬೀಳುತ್ತಿರುವುದರಿಂದ ಗ್ರಾಮಗಳ ರೈತರಿಗೆ ಹಾಗೂ ವಾಸಿಸುವ ಪ್ರದೇಶದ ಜನರಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ವಿದ್ಯುತ್ ತಂತಿಗಳನ್ನು ಬದಲಾವಣೆ ಮಾಡಿ ಈಗಿರುವ ವಿದ್ಯುತ್ ಪರಿವರ್ತಕಗಳನ್ನು ಹೆಚ್ಚಿಗೆ ಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

ಈ) ಸದರಿ ವಿದ್ಯುತ್ ದುರಸ್ತಿ ಕಾಮಗಾರಿಗಳನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಂಡು ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರಕಾರ ಚಿಂತನೆ ನಡೆಸಿದೆಯೇ? (ವಿವರ ಒದಗಿಸುವುದು)

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ರಾಜ್ಯದಾದ್ಯಂತ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಹಳೆಯದಾದ ವಿದ್ಯುತ್ ತಂತಿಗಳನ್ನು ಬದಲಾಯಿಸುವ ಕಾಮಗಾರಿಗಳನ್ನು ನಿಯಮಿತವಾಗಿ ಕೈಗೆತ್ತಿಕೊಳ್ಳುತ್ತಿವೆ.

ಆ) ಮತ್ತು ಇ) ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ಔರಾದ ವಿಧಾನ ಸಭಾ ಕ್ಷೇತ್ರದಲ್ಲಿ ಹಳೆಯದಾದ ವಿದ್ಯುತ್ ತಂತಿಗಳನ್ನು ಬದಲಾಯಿಸಲಾಗುತ್ತಿದೆ. ಔರಾದ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಹಾಗೂ ಔರಾದ ಪಟ್ಟಣದಲ್ಲಿ ಒಟ್ಟಾರೆ 94.615 ಕಿ.ಮೀ. ಎಲ್.ಟಿ. ಮಾರ್ಗದ ತಂತಿಯನ್ನು ಬದಲಾಯಿಸಲಾಗಿದೆ. (2008 ರಿಂದ 2013 ರವರೆಗೆ)

ಮುಂದುವರೆದು, ಔರಾದ ವಿಧಾನಸಭಾ ಕ್ಷೇತ್ರದಲ್ಲಿ 2010 ರಿಂದ 2014 ರವರೆಗೆ 39 ಸಂಖ್ಯೆಯ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲಾಗಿದೆ. 2014–15ನೇ ವಾರ್ಷಿಕ ಆಯವ್ಯಯದಲ್ಲಿ ಬೀದರ್ ವಿಭಾಗದಲ್ಲಿ ₹ 40 ಲಕ್ಷಗಳ ವೆಚ್ಚದಲ್ಲಿ ಒಟ್ಟು 22 ಸಂಖ್ಯೆಯ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಮತ್ತು ₹ 21 ಲಕ್ಷ ವೆಚ್ಚದಲ್ಲಿ 21 ಸಂಖ್ಯೆಯ ಪರಿವರ್ತಕಗಳ ಸಾಮರ್ಥ್ಯ ಹೆಚ್ಚಿಸಲು ಕಾರ್ಯ ಹಮ್ಮಿಕೊಳ್ಳಲಾಗಿದೆ.

ಈ) ಆಕಸ್ಮಿಕ ಅನಾಹುತಗಳಿಂದ ಹಾನಿಗೊಳಗಾಗಿರುವ ತಂತಿ ಮತ್ತು ವಿದ್ಯುತ್ ಕಂಬಗಳನ್ನು ತಕ್ಷಣವೇ ದುರಸ್ತಿಗೊಳಿಸಲು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ಕ್ರಮಗಳನ್ನು ಕೈಗೊಂಡಿದೆ.

2014–15ನೇ ಸಾಲಿನಲ್ಲಿ ಔರಾದ ವಿಧಾನ ಸಭಾ ಕ್ಷೇತ್ರದಲ್ಲಿ ಹಾಳಾದ ತಂತಿ ಬದಲಾವಣೆ / ವಿತರಣ ಮಾರ್ಗಗಳ ಸುಧಾರಣೆಗೆ ಕ್ರಮ ಕೈಗೊಳ್ಳಲು ಪರಿಶಿಷ್ಟ ಜಾತಿ ಯೋಜನೆಯಡಿ (SCP) 9.00 ಲಕ್ಷಗಳು

ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯಡಿ (TSP) 4.00 ಲಕ್ಷಗಳನ್ನು ರಾಜ್ಯ ಸರ್ಕಾರವು ಜೆಸ್ಕಾಂ ಕಂಪನಿಗೆ ನಿಗದಿಪಡಿಸಿದೆ.

ಇದಲ್ಲದೆ, ಜೆಸ್ಕಾಂವತಿಯಿಂದ 2014–15ನೇ ಸಾಲಿಗೆ, ಬೀದರ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಅಂದಾಜು ₹ 140.00 ಲಕ್ಷಗಳನ್ನು ವಿದ್ಯುತ್ ತಂತಿ ಬದಲಾವಣೆಗೆ ನಿಗದಿಪಡಿಸಲಾಗಿದೆ.

ಕೃಷಿ ಇಲಾಖೆಯ ಯೋಜನೆಗಳು

303(573); ಶ್ರೀ ಪ್ರಭು ಬಿ. ಚೌವ್ಹಾಣ್ (ಔರಾದ್)

ಅ) ಔರಾದ ವಿಧಾನ ಸಭಾ ಕ್ಷೇತ್ರದಲ್ಲಿ 2012 ರಿಂದ ಇಲ್ಲಿಯವರೆಗೆ ಅನುಷ್ಟಾನ ಮಾಡಿದ ಕೃಷಿ ಇಲಾಖೆ ಯೋಜನೆಗಳಾವುವು; ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು; (ವಾರ್ಷಿಕವಾರು, ಯೋಜನೆವಾರು ವಿವರ ಒದಗಿಸುವುದು)

ಆ) ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳ ರೂಪುರೇಷೆಗಳೇನು? (ವಿವರ ಒದಗಿಸುವುದು)

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) **ಕೃಷಿ ಇಲಾಖೆ:**

ಔರಾದ ವಿಧಾನಸಭಾ ಕ್ಷೇತ್ರದಲ್ಲಿ 2012 ರಿಂದ ಇಲ್ಲಿಯವರೆಗೆ ಅನುಷ್ಟಾನ ಮಾಡಿದ ಕೃಷಿ ಇಲಾಖೆಯ ಯೋಜನೆಗಳು ಹಾಗೂ ಅವುಗಳಿಗೆ ವೆಚ್ಚ ಮಾಡಿದ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ:

ಔರಾದ ವಿಧಾನಸಭಾ ಕ್ಷೇತ್ರದಲ್ಲಿ 2012 ರಿಂದ ಇಲ್ಲಿಯವರೆಗೆ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸಿದ